ಆಪದ್ಬಾಂಧವ

◆ ಸ್ವಾಮಿ ಪುರುಷೋತ್ತಮಾನಂದ

ಸ್ವಾಮಿ ವಿವೇಕಾನಂದರು ತಮ್ಮ ಬಾಲ್ಯದಿಂದಲೇ ಉದಾತ್ತ ಆದರ್ಶಗಳನ್ನು, ಶ್ರೇಷ್ಠ ಸದ್ಗುಣಗಳನ್ನು ವಿಶೇಷ ಗಮನಕೊಟ್ಟು ಅಭ್ಯಾಸ ಮಾಡಿಕೊಂಡು ಬಂದಿದ್ದರು. ನಿಜಕ್ಕೂ ಅವರ ಇಡೀ ಜೀವನವೇ ಸದ್ಗುಣಗಳಿಂದ ಪರಿಪೂರ್ಣವಾದುದು! ಅದರಲ್ಲೂ ಪ್ರೀತಿ, ಸಹಾನುಭೂತಿ, ಅನುಕಂಪೆ, ಕರುಣೆ ಇವು ಅವರ ವ್ಯಕ್ತಿತ್ವದಲ್ಲಿ ವಿಶೇಷವಾಗಿ ಮಿರುಗುತ್ತಿದ್ದ ಗುಣರತ್ನಗಳು ಎನ್ನಬಹುದು. ಈ ಸದ್ಗುಣಗಳನ್ನು ಅವರ ಸಹಪಾಠಿಗಳೂ ಮಿತ್ರರೂ ಸ್ಪಷ್ಟವಾಗಿ ಕಂಡಿದ್ದರು. ಆಗ ಅವರಿನ್ನೂ ನವತರುಣ ನರೇಂದ್ರನಾಥ ದತ್ತ.

ಆಪತ್ತಿಗೆ ಗುರಿಯಾದವರ ಸಹಾಯಕ್ಕೆ ಮುನ್ನುಗ್ಗುವುದು ನರೇಂದ್ರನ ಸ್ವಭಾವದಲ್ಲೇ ಸೇರಿಹೋಗಿತ್ತು. ಇದನ್ನು ತಿಳಿದಿದ್ದ ಅವನ ಗೆಳೆಯರೆಲ್ಲ ತಮಗೆ ಏನೇ ಕಷ್ಟ ಒದಗಿದರೂ ಅವನ ಬಳಿಗೆ ಓಡುತ್ತಿದ್ದರು. ನರೇಂದ್ರ ಓದುತ್ತಿದ್ದ ಕಾಲೇಜಿನಲ್ಲಿ ಶುಲ್ಕ ಕೊಡಲು ಸಾಧ್ಯವಾಗದ ಬಡ ವಿದ್ಯಾರ್ಥಿಗಳಿಗೆ ಕಾಲೇಜಿನಿಂದ ವಿನಾಯಿತಿ ದೊರೆಯುತ್ತಿತ್ತು. ಕೆಲವು ವಿಶೇಷ ಸಂದರ್ಭಗಳಲ್ಲಿ ಧನಸಹಾಯದ ಸವಲತ್ತೂ ದೊರೆಯುತ್ತಿತ್ತು. ಆದರೆ ಶುಲ್ಕ ವಿನಾಯಿತಿಯನ್ನೇ ಆಗಲಿ ಧನಸಹಾಯವನ್ನೇ ಆಗಲಿ ಬಯಸುವ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಸಕಾಲದಲ್ಲಿ ಅಧಿಕಾರಿಗಳ ಕೈಗೆ ತಲುಪಿಸಬೇಕಿತ್ತು. ರಾಜ್‌ಕುಮಾರ ಎಂಬವನು ಆ ಕಾಲೇಜಿನ ಒರಿಯ ಗುಮಾಸ್ತೆ. ಬಡ ವಿದ್ಯಾರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ ಶುಲ್ಕ ವಿನಾಯಿತಿಯನ್ನೋ ಧನಸಹಾಯವನ್ನೋ ಮಂಜೂರು ಮಾಡುವ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಈತನದಾಗಿತ್ತು. ಒಮ್ಮೆ ನರೇಂದ್ರನ ಸಹಪಾಠಿಯಾದ ಹರಿದಾಸ ಚಟರ್ಜಿ ಎಂಬ ಬಡ ವಿದ್ಯಾರ್ಥಿ ವರ್ಷವಿಡೀ ಫೀಸು ಕಟ್ಟಿಯೇ ಇರಲಿಲ್ಲ. ವರ್ಷಾಂತ್ಯದಲ್ಲಿ ಅವನು ನರೇಂದ್ರನ ಬಳಿ ಬಂದು ತನ್ನ ಕಷ್ಟವನ್ನು ತೋಡಿಕೊಂಡ.

ನರೇಂದ್ರನಾದರೋ ಎಲ್ಲರ ಗೆಳೆಯನಲ್ಲವೆ! ಇತರ ಸಹಪಾಠಿಗಳಂತೆ ಬಾಯಿಮಾತಿನ ಉಪಚಾರ ಹೇಳಿ ಕೈಬಿಡುವವನಲ್ಲ ಅವನು. ಅಥವಾ ಒಂದಿಷ್ಟು ಹುಡುಗರನ್ನು ಗುಂಪುಗಟ್ಟಿಕೊಂಡು ಬೀದಿ ಬದಿಯ ಚಾ ಅಂಗಡಿಯಲ್ಲಿ ಹರಟೆ ಕೊಚ್ಚುವಷ್ಟಕ್ಕೇ ಮುಕ್ತಾಯ ಗೊಳ್ಳುವ ಅಗ್ಗದ ಗೆಳೆತನವಲ್ಲ ಅವನದು. ನರೇಂದ್ರನ ಗುಣ ನಡತೆಗಳ ಪ್ರಬುದ್ಧತೆಯೇನು! ಅವನ ಅನುಕಂಪೆಯೇನು! ತಮಾಷೆ ಮಾಡುವಾಗಲೂ ಇತರರಿಗೆ ಅವಮಾನ, ಮುಜುಗರ ಆಗದಂತೆ ಎಚ್ಚರವಹಿಸುವ ಅವನ ಸೌಜನ್ಯವೇನು! ತನಗಿಂತ ಬಡವರೂ, ಕಡಿಮೆ ಬುದ್ಧಿವಂತರೂ ಆದವರ ವಿಷಯದಲ್ಲಿ ಅವನು ತೋರುತ್ತಿದ್ದ ಸಹೃದಯತೆ, ಸಹಾನುಭೂತಿಗಳ ಸವಿಯೇನು! ಈ ಎಲ್ಲ ಸದ್ಗುಣ, ಸೌಶೀಲ್ಯಗಳಿಂದಾಗಿ ಅವನು ತನ್ನ ಮಿತ್ರವೃಂದದಲ್ಲಿ ಒಬ್ಬ ದೇವತೆಯೇ ಆಗಿದ್ದ! ಆದ್ದರಿಂದಲೇ ಹರಿದಾಸ ಯಾವುದೇ ಸಂಕೋಚ ಪಡದೆ ನರೇಂದ್ರನೆದುರು ತನ್ನ ಸಂಕಷ್ಟವನ್ನು ತೋಡಿಕೊಂಡ. ಆಗ ನರೇಂದ್ರ, ತನಗೇ ಆ ಬಿಕ್ಕಟ್ಟು ಒದಗಿದೆಯೋ ಎಂಬಂತೆ ಆಲೋಚನಾಮಗ್ನನಾದ ಮತ್ತು ಹರಿದಾಸನಿಗೆ ಯಾವ ರೀತಿಯಿಂದಲಾದರೂ ನೆರವಾಗಲೇಬೇಕೆಂದು ನಿರ್ಧರಿಸಿದ.

ಅದಾಗಲೇ ವಾರ್ಷಿಕ ಪರೀಕ್ಷೆ ಸಮೀಪಿಸುತ್ತಿದೆ. ಕಾಲೇಜಿನ ಶುಲ್ಕ ಕಟ್ಟುವುದಿರಲಿ, ಪರೀಕ್ಷಾಶುಲ್ಕವನ್ನು ಪಾವತಿ ಮಾಡಲೂ ಹರಿದಾಸನಿಗೆ ಶಕ್ತಿಯಿರಲಿಲ್ಲ. ಹರಿದಾಸ ಚಿಂತಾಕ್ರಾಂತನಾಗಿದ್ದಾನೆ. ನರೇಂದ್ರ ಅವನಿಗೆ ಧೈರ್ಯ ತುಂಬುತ್ತ ಹೇಳಿದ:

"ತಾಳು, ಈ ವಿಷಯದಲ್ಲಿ ಏನಾದರೂ ಮಾಡಲೂ ಸಾಧ್ಯವಾಗುತ್ತದೋ ನೋಡೋಣ."

ಸರಿ, ಒಂದೆರಡು ದಿನಗಳಾದುವು. ವಿದ್ಯಾರ್ಥಿಗಳೆಲ್ಲ ಫೀಸು ಕಟ್ಟಲು ಆಫೀಸಿನ ಮುಂದೆ ಸಾಲಾಗಿ ನಿಂತಿದ್ದರು. ಸಾಲಿನಲ್ಲಿ ನಡುವೆ ಹರಿದಾಸ ಮತ್ತು ನರೇಂದ್ರರೂ ಇದ್ದಾರೆ. ತನ್ನ ಸರದಿ ಬಂದಾಗ ನರೇಂದ್ರ ಮುಖ್ಯ ಗುಮಾಸ್ತೆಯ ಹತ್ತಿರ ವಿನಯದಿಂದ ಕೇಳಿಕೊಂಡ:

"ಸರ್, ನಮ್ಮ ಹರಿದಾಸ್ ತುಂಬ ಬಡವ; ಫೀಸ್ ಕಟ್ಟುವಷ್ಟು ಅನುಕೂಲವಿಲ್ಲ. ದಯವಿಟ್ಟು ಅವನಿಗೆ ವಿನಾಯಿತಿ ಕೊಡಿಸಬೇಕು. ಅವನು ಉನ್ನತ ಶ್ರೇಣಿಯಲ್ಲಿ ಪಾಸಾಗುವ ವಿದ್ಯಾರ್ಥಿ. ನೀವು ವಿನಾಯಿತಿ ಕೊಡಿಸಿ ಪರೀಕ್ಷೆಗೆ ಕುಳಿತುಕೊಳ್ಳಲು ಅನುವು ಮಾಡಿಕೊಟ್ಟರೆ ಅವನು ಬದುಕಿಕೊಳ್ಳುತ್ತಾನೆ. ಇಲ್ಲದೆ ಹೋದರೆ ಅವನ ಕಥೆ ಮುಗಿದ ಹಾಗೆಯೇ...."

ನರೇಂದ್ರ ಹೀಗೆ ಅತ್ಯಂತ ಸೌಜನ್ಯದಿಂದ ಕೇಳಿದರೂ ಆ ಮುದಿ ಗುಮಾಸ್ತೆ ಗಂಟು ಮೋರೆ ಹಾಕಿಕೊಂಡು ಸಿಡುಕಿದ: "ಸರಿ, ಸರಿ! ನಿನ್ನ ವಕಾಲತ್ತೇನೂ ಬೇಕಾಗಿಲ್ಲ. ನೀನು ನಿನ್ನ ಕೆಲಸ ನೋಡಿಕೋ ಹೋಗು. ಹಣ ಕಟ್ಟದಿದ್ದರೆ ಅವನನ್ನು ಪರೀಕ್ಷೆಗೆ ಕೂಡಿಸಲು ಸಾಧ್ಯವೇ ಇಲ್ಲ."

ಹೀಗೆ ಹೇಳುವ ಅಧಿಕಾರ ಆ ಗುಮಾಸ್ತೆಗೆ ಇತ್ತು ಎಂಬುದೇನೋ ಸರಿಯೇ; ಆದರೆ ಅವನೀಗ ಕೆಣಕಿದ್ದು ಸಿಂಹದ ಮರಿಯನ್ನು! ರಾಜ್‌ಕುಮಾರನ ಮಾತನ್ನು ಕೇಳಿ ನರೇಂದ್ರನಿಗೆ ಸಿಟ್ಟು ಉಕ್ಕೇರಿತು. ಆದರೆ ಸಾಲಿನಲ್ಲಿ ಇನ್ನೂ ಬಹಳ ವಿದ್ಯಾರ್ಥಿಗಳು ತಮ್ಮ ಸರದಿಗಾಗಿ ಕಾಯುತ್ತ ನಿಂತಿದ್ದನ್ನು ಕಂಡು ಸಹನೆ ತಂದುಕೊಂಡು, ಪ್ರತಿಮಾತನ್ನೇನೂ ಆಡದೆ ಸುಮ್ಮನೆ ಬಂದುಬಿಟ್ಟ. ಹರಿದಾಸನಿಗೆ ತುಂಬ ನಿರಾಶೆಯಾಯಿತು. ಆದರೆ ನರೇಂದ್ರನೇನೂ

ಅತ್ಯಂತ ಸಮರ್ಪಕವಾಗಿ ನರೇಂದ್ರನ ವ್ಯಕ್ತಿತ್ವ, ಅವನ ಸಹಾನುಭೂತಿಯನ್ನು ಪರಿಚಯಿಸಿರುವ ಲೇಖಕರು ಬೆಳಗಾವಿಯ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರು. ತಮ್ಮ ಹಾದುಗಾರಿಕೆ, ಪ್ರವಚನ ಹಾಗೂ ಬರಹಗಳಿಗೆ ಪ್ರಸಿದ್ಧರಾಗಿರುವ ಪೂಜ್ಯರು ಪತ್ರಿಕೆಯ ಹಿತೈಷಿಗಳಲ್ಲಿ ಕೂಡ.

ಹತಾಶನಾಗಿರಲಿಲ್ಲ. ಗೆಳೆಯನನ್ನು ಸಮಾಧಾನ ಪಡಿಸುತ್ತ ಹೀಗೆಂದ: "ಅಷ್ಟೇಕೆ ನಿರಾಶನಾಗುತ್ತೀಯೋ? ಹಾಗೆ ಮಾತನಾಡುವುದೇ ಆ ಮುದುಕನ ಸ್ವಭಾವ. ನಾನು ನಿನಗೆ ಏನಾದರೊಂದು ವ್ಯವಸ್ಥೆಯನ್ನು ಮಾಡಿಯೇ ತೀರುತ್ತೇನೆ. ತಾಳು. ನೀನೇನೂ ಚಿಂತಿಸಬೇಡ." ನರೇಂದ್ರ ಒಮ್ಮೆ ಕೆಲಸವನ್ನು ಕೈಗೆ ತೆಗೆದುಕೊಂಡನೆಂದರೆ ಅದನ್ನು ಸಾಧಿಸಿಯೇ ಸಿದ್ಧ. ಅವನಿನ್ನೂ ಚಿಕ್ಕ ಹುಡುಗನಾಗಿದ್ದಾಗಲೆ ಸ್ನೇಹಿತರೊಂದಿಗೆ ಯುದ್ಧನೌಕೆಯನ್ನು ನೋಡಲು ಆಸೆಪಟ್ಟು ಹೋದಾಗ ಅಲ್ಲಿನ ಕಾವಲುಗಾರ "ಹುಡುಗರಿಗೆಲ್ಲ ಪ್ರವೇಶವಿಲ್ಲ" ಎಂದು ಗದರಿದರೂ ಎದೆಗೆಡದೆ ಉಪಾಯಾಂತರದಿಂದ ಕಛೇರಿಯ ಒಳಹೊಕ್ಕು ಅನುಮತಿಪತ್ರವನ್ನು ಪಡೆದುಕೊಂಡೇ ಬಂದಿದ್ದ! ಬಾಲ್ಯದಿಂದಲೂ ನರೇಂದ್ರನದು ಅದಮ್ಯ ಸಾಹಸ, ಅಜೇಯ ಪರಾಕ್ರಮ. ಈಗ ಈ ಮುದಿ ಗುಮಾಸ್ತೆಯನ್ನು ಹೇಗೆ ಬಗ್ಗಿಸ ಬೇಕೆಂಬುದು ತಿಳಿಯದೇ ಅವನಿಗೆ? ಕಾರ್ಯಸಾಧನೆಗೆ ಬೇಕು—ಧೈರ್ಯ! ಜೊತೆಗೆ ಇರಬೇಕು—ಯುಕ್ತಿ! ಇವೆರಡೂ ತುಂಬಿ ಕೊಂಡಿವೆ ನರೇಂದ್ರನಲ್ಲಿ. ಹೀಗಿದ್ದ ಮೇಲೆ ಅವನು ತನ್ನ ಕಾರ್ಯ ವನ್ನು ಸಾಧಿಸದೆ ಬಿಡುತ್ತಾನೆಯೆ?

ಆ ದಿನ ಸಂಜೆಯ ವೇಳೆಗೆ ಕಾಲೇಜು ಮುಗಿಯಿತು. ಆದರೆ ನರೇಂದ್ರ ಎಂದಿನಂತೆ ಮನೆಯ ಕಡೆಗೆ ಹೆಜ್ಜೆ ಹಾಕಲಿಲ್ಲ. ಬದಲಾಗಿ, ಬೇರೆ ಯಾವುದೋ ಒಂದು ಗಲ್ಲಿಯ ಕಡೆಗೆ ನಡೆದ. ಅಲ್ಲಿ ಅವನಿಗೇನು ಕೆಲಸವಿದ್ದಿರಬಹುದು...? ಇಲ್ಲೇ ಇರುವುದು ಸ್ವಾರಸ್ಯ! ಅದು ಸಾಮಾನ್ಯವಾದ ಗಲ್ಲಿಯಲ್ಲ. ಅಲ್ಲೊಂದು ಅಫೀಮಿನ ಅಂಗಡಿ ಇದೆ! ಮಾತ್ರವಲ್ಲ, ಅದು ಮುಖ್ಯ ಗುಮಾಸ್ತೆ ರಾಜ್‌ಕುಮಾರ ದಿನವೂ ಸಾಯಂಕಾಲ ಭೇಟಿ ನೀಡುವಂತಹ ಅಂಗಡಿ! ಇದನ್ನು ನರೇಂದ್ರ ಹೇಗೋ ಪತ್ತೆ ಹಚ್ಚಿಬಿಟ್ಟಿದ್ದ! ಅವನೀಗ ರಾಜ್‌ಕುಮಾರನ ಬರವನ್ನೇ ಎದುರು ನೋಡುತ್ತಾ ಮರೆ ಯಲ್ಲಿ ನಿಂತ. ಸೂರ್ಯ ಮುಳುಗುವ ಸಮಯವಾಯಿತು; ನಸು ಗತ್ತಲೆ ಆವರಿಸತೊಡಗಿತು. ನರೇಂದ್ರ ಅಲ್ಲೇ ಕಾಯುತ್ತ ನಿಂತಿ ದ್ದಾನೆ. ಸೂರ್ಯಾಸ್ತಮಾನವಾಗಿ ಕತ್ತಲೆ ಕಾಲಿಡುತ್ತಿದ್ದಂತೆಯೇ ಅಲ್ಲಿ ನುಸುಳಿದ ರಾಜ್‌ಕುಮಾರ. ಕೂಡಲೇ ನರೇಂದ್ರ ಸೀದಾ ಅವನೆದುರಿಗೇ ಬಂದು ನಿಂತುಬಿಟ್ಟ. ರಾಜ್‌ಕುಮಾರನಿಗೆ ಗಂಟಲು ಒಣಗಲಾರಂಭಿಸಿತು. ನರೇಂದ್ರನದು ಹಾಗೆ ಭಯ ಹುಟ್ಟಿಸು ವಂತಹ ವ್ಯಕ್ತಿತ್ವವೇನಲ್ಲ; ಆದರೆ ಅಂದು ಬೆಳಗ್ಗೆ ಅವನ ಮೇಲೆ ದರ್ಪದಿಂದ ಕಿಡಿಕಾರಿದ ಹಿನ್ನೆಲೆಯಲ್ಲಿ ಆ ಗುಮಾಸ್ತೆಗೆ ನರೇಂದ್ರನ ಸೌಮ್ಯವದನವೂ ಭಯಾನಕವಾಗಿ ಕಂಡಿತು, ಅಷ್ಟೆ. ಆದರೂ ರಾಜ್‌ಕುಮಾರ ತನಗಾದ ಗಾಬರಿಯನ್ನು ತೋರಗೊಡದೆ ಸಾಧ್ಯವಾದಷ್ಟೂ ಸಾವರಿಸಿಕೊಂಡು ತೊದಲಿದ:

"ಏ..ss ಏನು ದತ್ತ! ಇಲ್ಲಿದ್ದೀಯ!! ಇಲ್ಲಿಗೇಕೆ ಬಂದುಬಿಟ್ಟೆ?"

ನರೇಂದ್ರ ತನ್ನ ಹೊಳೆಹೊಳೆಯುವ ಅಕಳಂಕ ಕಣ್ಣುಗಳಿಂದ ಅವನನ್ನೇ ದಿಟ್ಟಿಸುತ್ತ ಶಾಂತವಾಗಿ ನುಡಿದ:

"ಸರ್, ದಯವಿಟ್ಟು ನೀವು ಹರಿದಾಸನಿಗೆ ಶುಲ್ಕವಿನಾಯಿತಿ ಕೊಡಿಸಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸಿ ಕೊಡ ಬೇಕು. ಒಂದು ವೇಳೆ ನೀವು ಇದಕ್ಕೆ ಒಪ್ಪದಿದ್ದರೆ ನಿಮ್ಮ ಗುಟ್ಟು ಬಯಲಾಗುತ್ತದೆ!"

ನರೇಂದ್ರನನ್ನು ಕಂಡೇ ಗುಮಾಸ್ತೆಯ ಜಂಘಾಬಲ ಉಡುಗಿ ಹೋಗಿತ್ತು. ಈಗ ಅವನ ನೇರ ಮಾತನ್ನು ಕೇಳಿದ ಮೇಲಂತೂ ಆ ಮುದುಕ ಬೆವತುಹೋದ. ಅವನು ಅಫೀಮಿನ ಚಟ ಅಂಟಿಸಿ ಕೊಂಡಿದ್ದರೂ ಕಾಲೇಜಿನಲ್ಲಿ, ಸಮಾಜದಲ್ಲಿ ಸಂಭಾವಿತನ ಮುಖ ವಾಡ ಹಾಕಿಕೊಂಡು ತಿರುಗಾಡುತ್ತಿದ್ದ. ಈಗ ತನ್ನ ಗುಟ್ಟು ರಟ್ಟಾ ಗುವ ಸಂದರ್ಭ ಬಂದಾಗ ಅವನ ಹಮ್ಮುಬಿಮ್ಮುಗಳೆಲ್ಲ ಇಳಿದು ಹೋಯಿತು. ನಯವಾದ ದನಿಯಲ್ಲಿ ನರೇಂದ್ರನಿಗೆ ಹೇಳಿದ:

"ಏನಪ್ಪಾ ನರೇಂದ್ರ! ಇಷ್ಟಕ್ಕೆಲ್ಲ ಕೋಪಿಸಿಕೊಂಡುಬಿಟ್ಟೆಯಾ! ನಿನ್ನಿಷ್ಟದಂತೆಯೇ ಮಾಡೋಣ. ನೀನು ಕೇಳಿದಮೇಲೆ 'ಇಲ್ಲ' ಎನ್ನುವುದಕ್ಕಾಗುತ್ತದೆಯೇ.... ಆದರೆ ನೋಡಪ್ಪ, ಅವನು ಕೊಡ ಬೇಕಾದ ಕಾಲೇಜು ಫೀಸನ್ನೇನೋ ಮಾಫಿ ಮಾಡಬಹುದು; ಪರೀಕ್ಷಾ ಶುಲ್ಕವನ್ನು ಮಾತ್ರ ಕಟ್ಟಬೇಕಾಗುತ್ತದಪ್ಪ."

ನರೇಂದ್ರ ಇದಕ್ಕೊಪ್ಪಿ, ಆ ಮುದುಕನನ್ನು ಅವನ ಪಾಡಿಗೆ ಬಿಟ್ಟು, ಹೊರಟುಹೋದ. ಮರುದಿನ ಮುಂಜಾವಿನಲ್ಲೇ ಅವನು ಹರಿದಾಸನ ಮನೆಗೆ ಹೋಗಿ ಉಲ್ಲಾಸದಿಂದ ಒಂದು ಹಾಡು ಹೇಳ ಲಾರಂಭಿಸಿದ. ಅದರ ಅರ್ಥ ಹೀಗಿದೆ:

"ಓ ಗೆಳೆಯ, ಈ ಮಧುರ ಮುಂಜಾನೆಯಲ್ಲಿ ಎದ್ದು ಪರ ಮಾತ್ಮನ ಅಪಾರ ವೈಭವದ ಮೇಲೆ ಧ್ಯಾನ ಮಾಡು. ಅದೋ ನೋಡು, ಆ ದೂರದ ಪರ್ವತಶಿಖರಗಳ ಮಧ್ಯದಲ್ಲಿ ಅರುಣ ಕಿರಣಧಾರಿಯಾದ ಸುಂದರ ಸೂರ್ಯ ಮೆಲ್ಲನೆ ಮೇಲೇರಿ ಬರುತ್ತಿದ್ದಾನೆ! ಇಂದಿನ ಈ ಮಂಗಲಕರ ದಿನದಂದು ಎಂಥ ಮಂಜುಳ ಮಂದಮಾರುತ ಬೀಸುತ್ತಿದೆ ನೋಡು! ಈ ಮಂದ ಮಾರುತವೂ ಕೂಡ ಭಗವಂತನ ವೈಭವವನ್ನು ಮಧುರವಾಗಿ ಹಾಡುತ್ತ, ಮಧುವನ್ನೇ ಸೂಸುತ್ತಿದೆ ನೋಡು! ನಾವೆಲ್ಲ ನಮ್ಮ ಹೃದಯದಲ್ಲಿ ಪ್ರೇಮಭಕ್ತಿಯ ಕಾಣಿಕೆಯನ್ನು ತುಂಬಿಕೊಂಡು, ಆ ಭಗವಂತನ ಧಾಮಕ್ಕೆ ಹೋಗೋಣ!"

ನರೇಂದ್ರ ಭಾವಪರವಶನಾಗಿ ಈ ಹಾಡನ್ನು ಹಾಡಿದ ಬಳಿಕ ತನ್ನ ಗೆಳೆಯನಿಗೆ ಆ ಸಂತೋಷದ ಸುದ್ದಿಯನ್ನು ತಿಳಿಸಿ, ಹಿಂದಿನ ಸಂಜೆ ನಡೆದ ಘಟನೆಯನ್ನು ರಸವತ್ತಾಗಿ, ನಾಟಕೀಯವಾಗಿ ಬಣ್ಣಿಸಿದ. ಅದನ್ನು ಕೇಳಿದ ಹರಿದಾಸ ಹೊಟ್ಟೆ ಹುಣ್ಣಾಗುವಷ್ಟು ನಕ್ಕ. ನರೇಂದ್ರನೂ ಆ ನಗುವಿನಲ್ಲಿ ಸೇರಿಕೊಂಡ. ✡

ಸಮಾಧಿಯ ಅನುಭವವನ್ನು ಕುರಿತು ಸ್ವಾಮಿ ಶಾರದಾನಂದರು

ಒಂದು ದಿನ ಶಾರದಾನಂದರ ಸೇವಕರಾಗಿದ್ದ ಸ್ವಾಮಿ ಅಸಿತಾನಂದರು "ನಿಮಗೆ ನಿರ್ವಿಕಲ್ಪ ಸಮಾಧಿಯ ಅನುಭವ ಲಭಿಸಿದೆಯೇ?" ಎಂದು ಕೇಳುವ ಧೈರ್ಯ ಮಾಡಿದರು. ಅದಕ್ಕೆ ಸ್ವಾಮಿ ಶಾರದಾನಂದರು "ಶ್ರೀರಾಮಕೃಷ್ಣರ ಜೊತೆಯಲ್ಲಿದ್ದಾಗ ನಾನೇನು ಹುಲ್ಲು ಕತ್ತರಿಸುತ್ತ ಕಾಲ ಕಳೆದೆನೆ?" ಎಂದರು. ಸೇವಕನು ವಿವರಗಳಿಗಾಗಿ ಮತ್ತೊಮ್ಮೆ ಕೇಳಿದಾಗ, ಸ್ವಾಮಿಗಳು "ಶ್ರೀರಾಮಕೃಷ್ಣ ಲೀಲಾಪ್ರಸಂಗದಲ್ಲಿರುವ ಸಮಾಧಿಯ ಮೇಲಣ ಅಧ್ಯಾಯವನ್ನು ಓದು. ಸಮಾಧಿಯನ್ನು ಕುರಿತು ನನಗೇ ಅನುಭವ ಆಗದಿದ್ದ ಯಾವುದನ್ನೂ ನಾನು ಅದರಲ್ಲಿ ಬರೆದಿಲ್ಲ" ಎಂದರು.